**ಕೃತಜ್ಞತೆಯ ಆರಾಧನೆ (ಇಬಾದತ್)**

**ದಿನಾಂಕ: 24 ಸಫರ್ 1448 ಹಿಜ್ರಿ (7 ಆಗಸ್ಟ್ 2026)**

**ಮೊದಲಾರ್ಧ:**

**ಸಮಸ್ತ ಪ್ರಶಂಸೆಯು ಅಲ್ಲಾಹನಿಗೆ ಮಾತ್ರ ಸಲ್ಲುತ್ತದೆ. ನಾವು ಅವನನ್ನೇ ಪ್ರಶಂಸಿಸುತ್ತೇವೆ, ಅವನಲ್ಲೇ ಸಹಾಯವನ್ನು ಮತ್ತು ಕ್ಷಮೆಯನ್ನು ಯಾಚಿಸುತ್ತೇವೆ. ನಮ್ಮ ಮನಸ್ಸಿನ ದುಷ್ಟತನದಿಂದ ಮತ್ತು ನಮ್ಮ ಕೆಟ್ಟ ಕರ್ಮಗಳಿಂದ ಅಲ್ಲಾಹನಲ್ಲಿ ರಕ್ಷಣೆ ಬೇಡುತ್ತೇವೆ. ಅಲ್ಲಾಹನು ಯಾರಿಗೆ ಸನ್ಮಾರ್ಗ ತೋರುತ್ತಾನೋ ಅವನನ್ನು ಯಾರೂ ದಾರಿ ತಪ್ಪಿಸಲಾರರು, ಮತ್ತು ಯಾರನ್ನು ದಾರಿ ತಪ್ಪಿಸುತ್ತಾನೋ ಅವನಿಗೆ ಸನ್ಮಾರ್ಗ ತೋರಿಸುವವರು ಯಾರೂ ಇಲ್ಲ.**

**ಅಲ್ಲಾಹನ ಹೊರತು ಆರಾಧನೆಗೆ ಅರ್ಹನಾದವನು ಬೇರೆ ಯಾರೂ ಇಲ್ಲ, ಅವನು ಏಕೈಕನು, ಅವನಿಗೆ ಯಾವುದೇ ಪಾಲುದಾರರಿಲ್ಲ ಎಂದು ನಾನು ಸಾಕ್ಷಿ ಹೇಳುತ್ತೇನೆ. ಹಾಗೂ ಮುಹಮ್ಮದ್ (ಸ್ವಲ್ಲಲ್ಲಾಹು ಅಲೈಹಿ ವಸಲ್ಲಮ್) ಅವರು ಅವನ ದಾಸ ಮತ್ತು ಪ್ರವಾದಿಯಾಗಿದ್ದಾರೆ ಎಂದು ಸಾಕ್ಷಿ ಹೇಳುತ್ತೇನೆ. ಅವರು ಸತ್ಯಸಂದೇಶವನ್ನು ತಲುಪಿಸಿದರು, ನೀಡಿದ ಜವಾಬ್ದಾರಿಯನ್ನು ಪೂರೈಸಿದರು ಮತ್ತು ಅಲ್ಲಾಹನ ಮಾರ್ಗದಲ್ಲಿ ಪ್ರಾಮಾಣಿಕವಾಗಿ ಶ್ರಮಿಸಿದರು.**

**"ಎಲೈ ಸತ್ಯವಿಶ್ವಾಸಿಗಳೇ! ನೀವು ಅಲ್ಲಾಹನಿಗೆ ಅಂಜಬೇಕಾದ ರೀತಿಯಲ್ಲಿ ಅಂಜಿರಿ ಮತ್ತು ಮುಸ್ಲಿಮರಾಗಿಯಲ್ಲದೆ ಮರಣ ಹೊಂದಬೇಡಿರಿ." (ಕುರ್‌ಆನ್ - ಆಲ್ ಇಮ್ರಾನ್: 102)**

**ಅತ್ಯಂತ ಸತ್ಯವಾದ ಮಾತು ಅಲ್ಲಾಹನ ಗ್ರಂಥ (ಕುರ್‌ಆನ್) ಮತ್ತು ಅತ್ಯುತ್ತಮ ಮಾರ್ಗದರ್ಶನ ಮುಹಮ್ಮದ್ (ಸ್ವಲ್ಲಲ್ಲಾಹು ಅಲೈಹಿ ವಸಲ್ಲಮ್) ಅವರ ಮಾರ್ಗದರ್ಶನವಾಗಿದೆ. ಧರ್ಮದಲ್ಲಿ ಹೊಸದಾಗಿ ಹುಟ್ಟುಹಾಕಿದ ವಿಷಯಗಳು ಕೆಟ್ಟದ್ದಾಗಿವೆ. ಪ್ರತಿಯೊಂದು ಹೊಸ ವಿಷಯವೂ 'ಬಿದ್‌ಅತ್' ಅಥವಾ ಧರ್ಮಬಾಹಿರ ಆಚರಣೆಯಾಗಿದೆ ಮತ್ತು ಪ್ರತಿಯೊಂದು ಬಿದ್‌ಅತ್**

ದಾರಿಗೇಡಿತನವಾಗಿದೆ, ಪ್ರತಿಯೊಂದು ದಾರಿಗೇಡಿತನದ ಅಂತ್ಯ ನರಕವಾಗಿದೆ.

ಅಲ್ಲಾಹನ ದಾಸರೇ:

ಆರಾಧನೆಗಳಲ್ಲೇ ಅತ್ಯಂತ ಉನ್ನತವಾದ ಸ್ಥಾನ ಎಂದರೆ ಶುಕ್ರ್ ಅಥವಾ ಕೃತಜ್ಞತೆ ಸಲ್ಲಿಸುವುದಾಗಿದೆ. ಇದು ಉನ್ನತವಾದ ಆರಾಧನೆ ಮತ್ತು ಅಲ್ಲಾಹನ ಸಾಮೀಪ್ಯ ಪಡೆಯುವ ದೊಡ್ಡ ಮಾರ್ಗ. ಅಲ್ಲಾಹನು ಕೃತಜ್ಞತೆ ಸಲ್ಲಿಸುವವರನ್ನು ಶ್ಲಾಘಿಸಿದ್ದಾನೆ:

- ನೂಹ್ (ಅ.ಸ) ಅವರ ಬಗ್ಗೆ ಅಲ್ಲಾಹನು ಹೇಳಿದನು: "ಅವರು ಕೃತಜ್ಞರಾದ ದಾಸರಾಗಿದ್ದರು."
- ಇಬ್ರಾಹೀಮ್ (ಅ.ಸ) ಅವರ ಬಗ್ಗೆ: "ಅವರು ಅಲ್ಲಾಹನ ಅನುಗ್ರಹಗಳಿಗೆ ಕೃತಜ್ಞತೆ ಸಲ್ಲಿಸುವವರಾಗಿದ್ದರು."
- ಸುಲೈಮಾನ್ (ಅ.ಸ) ಅವರು ತಮಗೆ ಸಿಕ್ಕ ಅನುಗ್ರಹಗಳನ್ನು ಕಂಡಾಗ: "ಇದು ನನ್ನ ಪಾಲಕಪ್ರಭುವಿನ ಅನುಗ್ರಹ, ನಾನು ಕೃತಜ್ಞನಾಗುತ್ತೇನೋ ಅಥವಾ ಕೃತಘ್ನನಾಗುತ್ತೇನೋ ಎಂದು ಪರೀಕ್ಷಿಸಲು ಇದನ್ನು ನೀಡಿದ್ದಾನೆ. ಕೃತಜ್ಞತೆ ಸಲ್ಲಿಸುವವನು ತನ್ನ ಸ್ವಂತ ಒಳಿತಿಗಾಗಿ ಸಲ್ಲಿಸುತ್ತಾನೆ." ಎಂದರು.

ನಮ್ಮ ಪ್ರವಾದಿ ಮುಹಮ್ಮದ್ (ಸ್ವಲ್ಲಲ್ಲಾಹು ಅಲೈಹಿ ವಸಲ್ಲಮ್) ಅವರು ತಮ್ಮ ಪಾಲಕಪ್ರಭುವಿಗೆ ಅಪಾರವಾಗಿ ಕೃತಜ್ಞತೆ ಸಲ್ಲಿಸುತ್ತಿದ್ದರು. ಮುಘೀರ ಬಿನ್ ಶೂಬ (ರ) ವರದಿ ಮಾಡುತ್ತಾರೆ: ಪ್ರವಾದಿಯವರು ರಾತ್ರಿಯಿಡೀ ಪ್ರಾರ್ಥನೆಯಲ್ಲಿ ನಿಂತು ಅವರ ಪಾದಗಳು ಬಾತುಕೊಳ್ಳುತ್ತಿದ್ದವು. "ನಿಮ್ಮ ಹಿಂದಿನ ಮತ್ತು ಮುಂದಿನ ತಪ್ಪುಗಳನ್ನು ಅಲ್ಲಾಹನು ಕ್ಷಮಿಸಿರುವಾಗ ಇಷ್ಟೊಂದು ಶ್ರಮ ಪಡಬೇಕೇ?" ಎಂದು ಕೇಳಿದಾಗ, ಪ್ರವಾದಿಯವರು: "ನಾನು ಕೃತಜ್ಞ ದಾಸನಾಗಬೇಡವೇ?" ಎಂದರು. (ಬುಖಾರಿ ಮತ್ತು ಮುಸ್ಲಿಂ)

ಮುಸ್ಲಿಂ ಬಾಂಧವರೇ:

ಅಲ್ಲಾಹನು ಜನರನ್ನು ಕೃತಜ್ಞರು ಮತ್ತು ಕೃತಘ್ನರು (ಅವಿಶ್ವಾಸಿಗಳು) ಎಂದು ವಿಂಗಡಿಸಿದ್ದಾನೆ.

"ನಾವು ಅವನಿಗೆ ದಾರಿಯನ್ನು ತೋರಿಸಿದೆವು; ಅವನು ಕೃತಜ್ಞನಾಗಲಿ ಅಥವಾ ಕೃತಘ್ನನಾಗಲಿ." (ಅಲ್-ಇನ್ಸಾನ್: 3)

ಆದರೆ, ಕೃತಜ್ಞತೆ ಸಲ್ಲಿಸುವ ದಾಸರು ಬಹಳ ಕಡಿಮೆ ಎಂದು ಅಲ್ಲಾಹನು ತಿಳಿಸಿದ್ದಾನೆ:

"ನನ್ನ ದಾಸರಲ್ಲಿ ಕೃತಜ್ಞತೆ ಸಲ್ಲಿಸುವವರು ಬಹಳ ವಿರಳ." (ಸಬಾ: 13)

ಹೆಚ್ಚಿನ ಜನರು ಅಲ್ಲಾಹನ ಅನುಗ್ರಹಗಳಲ್ಲೇ ಜೀವಿಸುತ್ತಿದ್ದರೂ ಕೃತಜ್ಞತೆ ಸಲ್ಲಿಸುವವರು ಕಡಿಮೆಯಿದ್ದಾರೆ. ಅನುಗ್ರಹಗಳು ಕೈಬಿಟ್ಟು ಹೋದಾಗಷ್ಟೇ ಅವರಿಗೆ ಅರಿವಾಗುತ್ತದೆ. ಆದ್ದರಿಂದ, ಪ್ರತಿಯೊಂದು ಕ್ಷಣದಲ್ಲೂ ಅಲ್ಲಾಹನ ಕೃಪೆಯನ್ನು ಗುರುತಿಸಿ, ಮನಸ್ಸಿನಿಂದ ಒಪ್ಪಿಕೊಂಡು, ನಾಲಿಗೆಯಿಂದ ಸ್ಮರಿಸಿ, ಶರೀರದ ಅಂಗಾಂಗಗಳಿಂದ ಅವನ ಆಜ್ಞೆಗಳನ್ನು ಪಾಲಿಸುವುದೇ ನಿಜವಾದ ಯಶಸ್ಸು.

ತಲ್ಕ್ ಬಿನ್ ಹಬೀಬ್ (ರ) ಹೇಳುತ್ತಾರೆ: "ಅಲ್ಲಾಹನ ಅನುಗ್ರಹಗಳು ಎಷ್ಟಿವೆಯೆಂದರೆ ಅದನ್ನು ಎಣಿಸಲು ಸಾಧ್ಯವಿಲ್ಲ. ಆದರೆ ನೀವು ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ತೌಬಾ ಅಥವಾ ಪಶ್ಚಾತ್ತಾಪ ಪಡುವವರಾಗಿರಿ."

ಆತ್ಮೀಯರೇ:

ಅಲ್ಲಾಹನ ಸುಂದರ ಹೆಸರುಗಳಲ್ಲಿ 'ಅಶ್-ಶಕೂರ್' ಅಥವಾ ಕೃತಜ್ಞತೆಯನ್ನು ಸ್ವೀಕರಿಸುವವನು ಯಾ ಪ್ರತಿಫಲ ನೀಡುವವನು ಎಂಬುದು ಒಂದಾಗಿದೆ. ಅವನು ಸಣ್ಣ ಸತ್ಕರ್ಮಕ್ಕೂ ದೊಡ್ಡ ಪ್ರತಿಫಲವನ್ನು ನೀಡುತ್ತಾನೆ. ಒಂದು ಒಳಿತಿಗೆ 10 ರಿಂದ 700 ರಷ್ಟು ಪಟ್ಟು ಹೆಚ್ಚು ಪ್ರತಿಫಲ ನೀಡುತ್ತಾನೆ. ಅಲ್ಲಾಹನು 'ಅಲ್-ಗಫೂರ್' ಅಂದರೆ ಅತ್ಯಧಿಕ ಕ್ಷಮಿಸುವವನು ಮತ್ತು 'ಅಶ್-ಶಕೂರ್' ಎಂದು ತನ್ನನ್ನು ಕರೆದುಕೊಂಡಿದ್ದಾನೆ. ಅವನು ಪಾಪಗಳನ್ನು ಕ್ಷಮಿಸುವವನು ಮತ್ತು ಸಣ್ಣ ಒಳಿತಿಗೂ ಅತ್ಯುತ್ತಮ ಪ್ರತಿಫಲ ನೀಡುವವನಾಗಿದ್ದಾನೆ.

ಕೃತಜ್ಞರಾಗಲು ನಮಗಿರುವ ಮಾರ್ಗಗಳು:

1. ಪ್ರಾರ್ಥನೆ (ದುಆ): ಪ್ರವಾದಿ ಸುಲೈಮಾನ್ (ಅ.ಸ) ಅವರು ಪ್ರಾರ್ಥಿಸುತ್ತಿದ್ದರು: "ನನ್ನ ರಕ್ಷಕನೇ, ನೀನು ನನಗೂ ನನ್ನ ತಂದೆ-ತಾಯಿಗೂ ನೀಡಿದ ಅನುಗ್ರಹಕ್ಕೆ ಕೃತಜ್ಞತೆ ಸಲ್ಲಿಸಲು ನನಗೆ ಶಕ್ತಿ ನೀಡು."

ಪ್ರವಾದಿ (ಸ್ವಲ್ಲಲ್ಲಾಹು ಅಲೈಹಿ ವಸಲ್ಲಮ್) ಅವರು ಮುಆಝ್ (ರ) ಅವರಿಗೆ ಪ್ರತಿ ನಮಾಝಿನ ನಂತರ ಹೀಗೆ ಪ್ರಾರ್ಥಿಸಲು ಕಲಿಸಿದರು: "ಅಲ್ಲಾಹುಮ್ಮ ಅಇನ್ನೀ ಅಲಾ ಝಿಕ್ರಿಕ ವ ಶುಕ್ರಿಕ ವ ಹುಸ್ನಿ ಇಬಾದತಿಕ್" (ಓ ಅಲ್ಲಾಹ್, ನಿನ್ನ ಸ್ಮರಣೆ, ನಿನ್ನ ಕೃತಜ್ಞತೆ ಮತ್ತು ನಿನ್ನ ಉತ್ತಮ ಆರಾಧನೆ ಮಾಡಲು ನನಗೆ ಸಹಾಯ ಮಾಡು).

2. ಅನುಗ್ರಹಗಳನ್ನು ಸ್ಮರಿಸುವುದು: "ನೀವು ಕೃತಜ್ಞತೆ ಸಲ್ಲಿಸಿದರೆ ನಾನು ನಿಮಗೆ ಇನ್ನಷ್ಟು ಹೆಚ್ಚಿಸಿ ಕೊಡುವೆನು." (ಇಬ್ರಾಹಿಂ: 7).

3. ಅನುಗ್ರಹಗಳನ್ನು ಒಳ್ಳೆಯ ಕಾರ್ಯಕ್ಕೆ ಬಳಸುವುದು: ಅಲ್ಲಾಹನಿಗೆ ಇಷ್ಟವಿಲ್ಲದ ಕಾರ್ಯಗಳಲ್ಲಿ ಆ ಅನುಗ್ರಹವನ್ನು ಬಳಸದಿರುವುದೇ ನಿಜವಾದ ಕೃತಜ್ಞತೆ.

4. ನಿಮಗಿಂತ ಕೆಳಗಿರುವವರನ್ನು ನೋಡುವುದು: ಪ್ರವಾದಿ (ಸ್ವಲ್ಲಲ್ಲಾಹು ಅಲೈಹಿ ವಸಲ್ಲಮ್) ಹೇಳಿದರು: "ಐಹಿಕ ವಿಷಯಗಳಲ್ಲಿ ನಿಮಗಿಂತ ಕೆಳಗಿರುವವರನ್ನು ನೋಡಿರಿ, ನಿಮಗಿಂತ ಮೇಲಿರುವವರನ್ನಲ್ಲ. ಇದು ಅಲ್ಲಾಹನ ಅನುಗ್ರಹವನ್ನು ನೀವು ಕ್ಷುಲ್ಲಕವಾಗಿ ಕಾಣದಿರಲು ಸಹಾಯ ಮಾಡುತ್ತದೆ." (ಮುಸ್ಲಿಂ)

ದ್ವಿತೀಯಾರ್ಧ:

ಅಲ್ಲಾಹನಿಗೆ ಸಮಸ್ತ ಪ್ರಶಂಸೆಗಳು. ಮುಹಮ್ಮದ್ (ಸ್ವಲ್ಲಲ್ಲಾಹು ಅಲೈಹಿ ವಸಲ್ಲಮ್) ಅವರ ಮೇಲೆಯೂ, ಅವರ ಕುಟುಂಬದವರ ಮತ್ತು ಅನುಯಾಯಿಗಳ ಮೇಲೆಯೂ ಅಲ್ಲಾಹನ ಕಾರುಣ್ಯ ಮತ್ತು ಶಾಂತಿ ಸದಾ ಇರಲಿ.

ಅಲ್ಲಾಹನ ದಾಸರೇ:

ಅಲ್ಲಾಹನು ನಮಗೆ ನೀಡಿದ ಅತಿ ದೊಡ್ಡ ಅನುಗ್ರಹಗಳಲ್ಲಿ 'ನೀರು' ಒಂದಾಗಿದೆ. ನಮಗೆ ಯಾವುದೇ ಕಷ್ಟವಿಲ್ಲದೆ ನೀರು ಸಿಗುತ್ತಿದೆ. ಆದರೆ ಜಗತ್ತಿನಲ್ಲಿ ಕುಡಿಯುವ ನೀರಿಗಾಗಿ ಮೈಲಿಗಟ್ಟಲೆ ನಡೆಯುವ ಜನರಿದ್ದಾರೆ.

ಅಲ್ಲಾಹನು ಹೇಳುತ್ತಾನೆ: "ಹೇಳಿರಿ: ನಿಮ್ಮ ನೀರು ಭೂಮಿಯ ಆಳಕ್ಕೆ ಇಳಿದು ಹೋದರೆ, ನಿಮಗೆ ಹರಿಯುವ ಶುದ್ಧ ನೀರನ್ನು ತಂದು ಕೊಡುವವನು ಯಾರೆಂದು ಯೋಚಿಸಿರಿ ? '" (ಅಲ್-ಮುಲ್ಕ್: 30)

ನೀರಿನ ಪೋಲು ತಡೆಯುವುದು ಕೃತಜ್ಞತೆಯ ಭಾಗವಾಗಿದೆ. ನಮ್ಮ ಧರ್ಮವು ವುಝೂ ಮಾಡುವಾಗಲೂ ನೀರನ್ನು ಪೋಲು ಮಾಡಬಾರದೆಂದು ಹೇಳಿದೆ. ಪ್ರವಾದಿ (ಸ್ವಲ್ಲಲ್ಲಾಹು ಅಲೈಹಿ ವಸಲ್ಲಮ್) ಮೂರು ಬಾರಿ ವುಝೂ ಮಾಡಿ: "ವುಝೂ ಮಾಡುವ ವಿಧಾನ ಇದೇ. ಯಾರು ಇದಕ್ಕಿಂತ ಹೆಚ್ಚು ಮಾಡುತ್ತಾರೋ ಅವರು ತಪ್ಪೆಸಗಿದ್ದಾರೆ ಮತ್ತು ಅನ್ಯಾಯ ಮಾಡಿದ್ದಾರೆ" ಎಂದಿದ್ದಾರೆ.

ಹಾಗೆಯೇ, ಆಧುನಿಕ ಯುಗದಲ್ಲಿ ಅಲ್ಲಾಹನು ನೀಡಿದ ಮತ್ತೊಂದು ದೊಡ್ಡ ಅನುಗ್ರಹ 'ವಿದ್ಯುತ್' (ಕರೆಂಟ್). ವಿದ್ಯುತ್ ಇಲ್ಲದಿದ್ದರೆ ಜೀವನವೇ ಸ್ಥಗಿತಗೊಂಡಂತೆ ಭಾಸವಾಗುತ್ತದೆ. ಆದರೆ ಅನೇಕರು ಯಾವುದೇ ಕಾಳಜಿಯಿಲ್ಲದೆ ಹಗಲು-ರಾತ್ರಿ ವಿದ್ಯುತ್ ಪೋಲು ಮಾಡುತ್ತಾರೆ. ಪ್ರವಾದಿ (ಸ್ವಲ್ಲಲ್ಲಾಹು ಅಲೈಹಿ ವಸಲ್ಲಮ್) ಹೇಳಿದ್ದಾರೆ: "ಅಲ್ಲಾಹನು ಮೂರು ವಿಷಯಗಳನ್ನು ದ್ವೇಷಿಸುತ್ತಾನೆ: ಅನಗತ್ಯ ಮಾತುಕತೆ, ಧನ-ಸಂಪತ್ತನ್ನು ಪೋಲು ಅಥವಾ ವ್ಯರ್ಥ ಮಾಡುವುದು ಮತ್ತು ಅತಿಯಾಗಿ ಪ್ರಶ್ನಿಸುವುದು." (ಬುಖಾರಿ ಮತ್ತು ಮುಸ್ಲಿಂ)

ಪ್ರಾರ್ಥನೆ (ದುಆ):

- ಓ ಅಲ್ಲಾಹ್, ನಮ್ಮ ಹೃದಯಗಳಲ್ಲಿ ಈಮಾನ್ ಅಥವಾ ವಿಶ್ವಾಸವನ್ನು ಪ್ರಿಯವಾಗಿಸು, ಅಧರ್ಮ ಮತ್ತು ಪಾಪಗಳನ್ನು ದ್ವೇಷಿಸುವಂತೆ ಮಾಡು.

- ಓ ಅಲ್ಲಾಹ್ ಇಸ್ಲಾಂ ಮತ್ತು ಮುಸ್ಲಿಮರಿಗೆ ಗೌರವ ನೀಡು.

- ಓ ಅಲ್ಲಾಹ್ ಕುವೈತ್ ದೇಶವನ್ನು ಮತ್ತು ಅದರ ಜನರನ್ನು ಎಲ್ಲಾ ಕೆಡುಕುಗಳಿಂದ ರಕ್ಷಿಸು. ಈ ದೇಶದಲ್ಲಿ ಮತ್ತು ಸಮಸ್ತ ಮುಸ್ಲಿಂ ದೇಶಗಳಲ್ಲಿ ಶಾಂತಿ-ನೆಮ್ಮದಿ ನೆಲೆಸುವಂತೆ ಮಾಡು.

- ನಮ್ಮ ನಾಯಕರಿಗೆ ಮತ್ತು ಆಡಳಿತಗಾರರಿಗೆ ಸನ್ಮಾರ್ಗ ಹಾಗೂ ಒಳಿತಿನ ದಾರಿಯಲ್ಲಿ ನಡೆಯಲು ತೌಫೀಕ್ ನೀಡು.

ಅಂತಿಮವಾಗಿ... ಸಕಲ ಸ್ತುತಿ ಸ್ತೋತ್ರಗಳು ಸರ್ವಲೋಕಗಳ ರಕ್ಷಕನಾದ ಅಲ್ಲಾಹನಿಗೆ ಮಾತ್ರ ಸಲ್ಲಬೇಕು ಎಂದು ಹೇಳಿ ಮಾತು ಮುಗಿಸುತ್ತೇನೆ.